# ಪುರಸಭೆ ಪುತ್ತೂರು, ದ.ಕ.

ನಂ/ಮಿಸ್/ಸಿಆರ್/ /09-10 ದಿನಾಂಕ: 29/12/2009

## ಪ್ರಕಟಣೆ

ಕರ್ನಾಟಕ ಪುರಸಭೆಗಳ ಕಾಯಿದೆ 1964 ರ ಕಲಂ ಸಂಖ್ಯೆ 133 ಮತ್ತು 136 ರ ಪ್ರಕಾರ ಪುರಸಭಾ ಪೂರ್ವಭಾವಿ ಪರವಾನಿಗೆ ಇಲ್ಲದೇ ಮತ್ತು ಈಗಾಗಲೇ ಅನುಮತಿ ಪಡಕೊಂಡು ನವೀಕರಿಸದೇ ಇರುವ ಅನಧಿಕೃತ ಜಾಹೀರಾತು ಪ್ರಚಾರ ಪ್ರದರ್ಶಿಸುವವರ ಮಾಹಿತಿಗಾಗಿ.

ಕರ್ನಾಟಕ ಪುರಸಭೆಗಳ ಕಾಯಿದೆ 1964 ರ ಕಲಂ 133 ರ ಪ್ರಕಾರ ಪುರಸಭೆಯ ಪೂರ್ವಭಾವಿ ಪರವಾನಿಗೆ ಇಲ್ಲದೇ ಯಾ ಅನುಮತಿ ಪಡೆದು ನವೀಕರಿಸದೇ ಪ್ರಚಾರ/ಜಾಹೀರಾತು ಫಲಕಗಳನ್ನು ಜಾಹೀರಾತು ಬೋರ್ಡ್, ಫ್ಲೆಕ್ಸ್, ಗೋಡೆ ಬರಹ, ನಾಮಫಲಕ, ಟಾಕೀಸುಗಳಲ್ಲಿ ಸ್ಲೈಡುಗಳು, ಬ್ಯಾನರ್, ಭಿತ್ತಿಪತ್ರಗಳು ಇತ್ಯಾದಿ ಸಾರ್ವಜನಿಕರಿಗೆ ಪ್ರಚುರಪಡಿಸಿರುವುದು ಕಾನೂನು ಬಾಹಿರವಾಗಿರುತ್ತದೆ. ಈ ಬಗ್ಗೆ ಈ ಹಿಂದಿನಿಂದಲೂ ಪತ್ರಿಕೆ ಮೂಲಕ ಪ್ರಚುರಪಡಿಸಿದ್ದು, ಅನಧಿಕೃತವಾಗಿ ಅಳವಡಿಸಿದ ಜಾಹೀರಾತನ್ನು ಅಧಿಕೃತಗೊಳಿಸಿರುವುದಿಲ್ಲ. ಈ ಪ್ರಕಟಣೆ ನೀಡಿದ 3 ದಿನಗಳ ಒಳಗಾಗಿ ಕಛೇರಿಗೆ ವಿವರ ನೀಡಿ ಶುಲ್ಕ ಪಾವತಿಸಿ ಅನುಮತಿ ಪಡಕೊಳ್ಳದೇ ಇದ್ದಲ್ಲಿ, ಪುರಸಭಾ ಕಾಯ್ದೆ 1964 ರ ಕಲಂ 136 ರಲ್ಲಿ ದತ್ತವಾಗಿರುವ ಅಧಿಕಾರದಂತೆ ಅನಧಿಕೃತವಾಗಿ ಅಳವಡಿಸಿರುವ ಜಾಹೀರಾತುಗಳನ್ನು ಕೀಳಿಸಿ ಯಾ ಬಣ್ಣ ಬಳಿದು ವಿರೂಪಗೊಳಿಸಲಾಗುವುದು ಮತ್ತು ಈ ಬಗ್ಗೆ ಸಂಬಂಧಪಟ್ಟ ಖರ್ಚುವೆಚ್ಚಗಳನ್ನು ಸಂಬಂಧಪಟ್ಟವರಿಂದಲೇ ವಸೂಲು ಮಾಡಲಾಗುವುದೆಂದು ತಿಳಿಸಲಾಗಿದೆ. ಸಾರ್ವಜನಿಕರು ಯಾವುದೇ ಅಸಂತೋಷಕರ ಚಟುವಟಿಕೆಗಳಿಗೆ ಆಸ್ಪದ ನೀಡದೇ ಪುರಸಭೆಯೊಂದಿಗೆ ಸಹಕರಿಸಲು ಕೋರಿದೆ.

ಸಹಿ/-
(ಶ್ರೀ ರಾಜೇಶ್ ಬನ್ನೂರು)
ಅಧ್ಯಕ್ಷರು,
ಪುರಸಭೆ ಪುತ್ತೂರು

ಸಹಿ/-
(ಶ್ರೀ ಎ.ಎಸ್.ರಾಣೆ)
ಮುಖ್ಯಾಧಿಕಾರಿ,
ಪುರಸಭೆ ಪುತ್ತೂರು